





# ಶ್ರೀರಾಮಕೃಷ್ಣ ವಿದ್ಯಾಶಾಲೆಯ ಹಳೆಯ ವಿದ್ಯಾರ್ಥಿ ಸಂಘದ ಸುವರ್ಣ ಮಹೋತ್ಸವ ಮತ್ತು ‘ವಿಶ್ವ ಸಮ್ಮೇಳನ’

ಮೈಸೂರು ರಾಮಕೃಷ್ಣ ವಿದ್ಯಾಶಾಲೆಯ ಹಳೆಯ ವಿದ್ಯಾರ್ಥಿ ಸಂಘದ ಸುವರ್ಣ ಮಹೋತ್ಸವ ಹಾಗೂ ‘ವಿಶ್ವ ಸಮ್ಮೇಳನ’ವು ೨೦೨೪ ಡಿಸೆಂಬರ್ ೨೦ ರಿಂದ ೨೨ರ ತನಕ ನೆರವೇರಿತು. ವಿದ್ಯಾಶಾಲೆಯ ೭೨ನೇ ವಾರ್ಷಿಕೋತ್ಸವವನ್ನೂ ಇದರೊಂದಿಗೆ ಆಚರಿಸಲಾಯಿತು.

**ಡಿಸೆಂಬರ್ ೨೦ :** ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆ (ರಿಂಸೆ)ಯಲ್ಲಿ ಹಳೆಯ ವಿದ್ಯಾರ್ಥಿಗಳಿಗಾಗಿ **ಆಧ್ಯಾತ್ಮಿಕ ಶಿಬಿರ**ದೊಂದಿಗೆ ಕಾರ್ಯಕ್ರಮವು ಆರಂಭಗೊಂಡಿತು. ಮೈಸೂರು ಆಶ್ರಮದ ಅಧ್ಯಕ್ಷರಾದ ಸ್ವಾಮಿ ಮುಕ್ತಿದಾನಂದಜಿ ಮಹಾರಾಜ್ ಅವರು ಪ್ರಾಸ್ತಾವಿಕ ಭಾಷಣ ಮಾಡಿದರು. ಸ್ವಾಮಿ ನಿತ್ಯಸ್ಥಾನಂದಜಿ, ಸ್ವಾಮಿ ಆತ್ಮಶ್ರದ್ಧಾನಂದಜಿ, ಸ್ವಾಮಿ ಮಹೇಶಾತ್ಮಾನಂದಜಿ ಹಾಗೂ ಸ್ವಾಮಿ ಮಹಾಮೇಧಾನಂದಜಿ ಶಿಬಿರದ ಅಂಗವಾಗಿ ಭಾಷಣ ಮಾಡಿದರು. ಬೆಂಗಳೂರಿನ ‘**ವಿವೇಕ ಹಂಸ**’ ಬಳಗದವರು ಭಜನೆಗಳನ್ನು ನೆರವೇರಿಸಿಕೊಟ್ಟರು.

ಸುವರ್ಣ ಮಹೋತ್ಸವದ **ಉದ್ಘಾಟನೆ**ಯು ಮಧ್ಯಾಹ್ನ ೩.೦೦ ಕ್ಕೆ ನೆರವೇರಿತು. ಪ್ರಧಾನ ಅತಿಥಿಗಳಾಗಿ ಪದ್ಮವಿಭೂಷಣ ಡಾ. ವಿ.ಕೆ.ಅತ್ರೆಯವರು ಹಾಗೂ ವಿಶೇಷ ಅತಿಥಿಗಳಾಗಿ ಸಂಸದ ಶ್ರೀ ತೇಜಸ್ವಿಸೂರ್ಯ ಅವರು ಭಾಗವಹಿಸಿ ಮಾತನಾಡಿದರು. ಅತಿಥಿಗಳು ದೀಪ ಬೆಳಗುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ವಿಶೇಷ ಅಂಚೆ ಕವರ್ ಹಾಗೂ ಸ್ಟಾಂಪನ್ನು ಬಿಡುಗಡೆ ಮಾಡಲಾಯಿತು. ಬಳಿಕ ವಿದ್ಯಾಶಾಲೆಯ ಹಳೆಯ ವಿದ್ಯಾರ್ಥಿಗಳಾದ ಸ್ವಾಮಿ ದಯಾಮೂರ್ತ್ಯಾನಂದಜಿ, ಸ್ವಾಮಿ ಪುಣ್ಯೇಶ್ವರಾನಂದಜಿ, ಸ್ವಾಮಿ ಸತ್ಯೇಶಾನಂದಜಿ ಹಾಗೂ ವಿದ್ಯಾಶಾಲೆಯ ಹಿಂದಿನ ಪ್ರಾಂಶುಪಾಲರಾದ ಶ್ರೀ ಕೀರ್ತಿಕುಮಾರ್ ಅವರು ಮಾತನಾಡಿದರು. ಕೊನೆಯಲ್ಲಿ ಆಶ್ರಮದ ಅಧ್ಯಕ್ಷರಾದ ಸ್ವಾಮಿ ಮುಕ್ತಿದಾನಂದಜಿ ಆಶೀರ್ವಚನ ನೀಡಿದರು. ಸಂಜೆ ೭ ರಿಂದ ‘ಸರಿಗಮಪ’ ತಂಡದವರಿಂದ ‘**ಸ್ವರ ತರಂಗ**’ ಎಂಬ ಸಂಗೀತ ಕಾರ್ಯಕ್ರಮವು ನಡೆಯಿತು.

**ಡಿಸೆಂಬರ್ ೨೧ :** ಬೆಳಿಗ್ಗೆ ೮:೪೫ ರಿಂದ ಎಲ್ಲ ಸಂನ್ಯಾಸಿಗಳಿಗೆ ಗೌರವಾರ್ಪಣೆಯ ಕಾರ್ಯಕ್ರಮ ‘**ಗುರುವಂದನ**’ ನಡೆಯಿತು. ಬಳಿಕ ಚರ್ಚೆ, ತರಗತಿ ಇತ್ಯಾದಿಗಳು ನಡೆದವು. ಸಂಜೆ ೫ಕ್ಕೆ ವಿದ್ಯಾಶಾಲೆಯ ವಾಷಿಕೋತ್ಸವದ ಅಂಗವಾಗಿ ‘ಕ್ರೀಡಾ ಪ್ರದರ್ಶನ’ ನಡೆಯಿತು. ವಿಶೇಷ ಅತಿಥಿಗಳಾಗಿ ಕ್ಯಾಪ್ಟನ್ ಜಿ.ಆರ್. ಗೋಪೀನಾಥ್ ಅವರು ಭಾಗವಹಿಸಿ ಮಾತನಾಡಿದರು. ವಾರ್ಷಿಕೋತ್ಸವದ ಪ್ರಧಾನ ಅತಿಥಿಗಳಾಗಿ ಪದ್ಮವಿಭೂಷಣ ಡಾ. ಡಿ.ವೀರೇಂದ್ರ ಹೆಗ್ಗಡೆಯವರು ಭಾಗವಹಿಸಿ, ಪ್ರಧಾನ ಭಾಷಣ ನೆರವೇರಿಸಿದರು. ಬಳಿಕ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಶಾಲೆಯ ವಿದ್ಯಾರ್ಥಿಗಳಿಂದ ಕನ್ನಡ ನಾಟಕ ‘**ನಿತ್ಯವಿನೂತನ ಶ್ರೀರಾಮ**’ ಪ್ರದರ್ಶನಗೊಂಡಿತು.

**ಡಿಸೆಂಬರ್ ೨೨ : ಬೆಳಿಗ್ಗೆ** ವಿದ್ಯಾಶಾಲೆಯ ಹಳೆಯ ವಿದ್ಯಾರ್ಥಿಗಳು ನಿರ್ಮಾಣದ ಹಂತದಲ್ಲಿರುವ ‘**ವಿವೇಕ ಸ್ಮಾರಕ**’ಕ್ಕೆ ಭೇಟಿ ನೀಡಿದರು. ಬಳಿಕ ಶ್ರೀರಾಮಕೃಷ್ಣ ಆಶ್ರಮದಲ್ಲಿ ನಡೆಯುತ್ತಿದ್ದ **ಶ್ರೀಶಾರದಾದೇವಿ ಜಯಂತಿ**ಯಲ್ಲಿ ಭಾಗವಹಿಸಿದರು. ೧೧.೪೫ಕ್ಕೆ ವಿದ್ಯಾಶಾಲೆಯ ಅಧ್ಯಾಪಕರಿಗೆ ಹಾಗೂ ಸಿಬ್ಬಂದಿಗಳಿಗೆ ಸನ್ಮಾನ ಮಾಡಲಾಯಿತು. ೨.೩೦ಕ್ಕೆ ನಡೆದ **ಸಮಾರೋಪ ಸಮಾರಂಭ**ದಲ್ಲಿ ಸಂಸದ ಶ್ರೀ ಜಿ. ಕುಮಾರ್‌ನಾಯಕ್ ಅವರು ಭಾಗವಹಿಸಿ ಮಾತನಾಡಿದರು. ಇದರೊಂದಿಗೆ ಮೂರು ದಿನಗಳ ಸುವರ್ಣ ಮಹೋತ್ಸವವು ಸಂಪನ್ನಗೊಂಡಿತು.












ಸುದ್ದಿ ಸಂಚಯ

# ಭಾವಪ್ರಚಾರ ಪರಿಷತ್ತಿನ ದಶಮಾನೋತ್ಸವ - ೨೦೨೪

**ಉದ್ಘಾಟನೆ:** ಕರ್ನಾಟಕ ಭಾವಪ್ರಚಾರ ಪರಿಷತ್ತಿನ ದಶಮಾನೋತ್ಸವ - **'ವಿವೇಕ ದಶಮಿ : ಭಾವಾವಲೋಕನ'**ವು ತುಮಕೂರು ರಾಮಕೃಷ್ಣ -ವಿವೇಕಾನಂದ ಆಶ್ರಮದಲ್ಲಿ ಡಿಸೆಂಬರ್ ೨೭, ೨೮ ಹಾಗೂ ೨೯ರಂದು ಅತ್ಯಂತ ವಿಜೃಂಭಣೆಯಿಂದ ನೆರವೇರಿತು. ಡಿಸೆಂಬರ್ ೨೭ ರಂದು ಸಂಜೆ ಉದ್ಘಾಟನಾ ಸಮಾರಂಭ ನಡೆಯಿತು. ತುಮಕೂರಿನ ಶ್ರೀ ಸಿದ್ಧಗಂಗಾ ಮಠದ ಅಧ್ಯಕ್ಷರಾದ ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ರಾಮಕೃಷ್ಣ ವಿವೇಕಾನಂದ ಭಾವಪ್ರಚಾರ ಪರಿಷತ್ತಿನ ರಾಜ್ಯಾಧ್ಯಕ್ಷರಾದ ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷ ಸ್ವಾಮಿ ಮುಕ್ತಿದಾನಂದಜಿ ಮಹಾರಾಜ್ ಅವರು ದಿವ್ಯಸಾನ್ನಿಧ್ಯ ವಹಿಸಿ ಮಾತನಾಡಿದರು. ನೆಲ್ಲೂರು ರಾಮಕೃಷ್ಣ ಮಿಷನ್ನಿನ ಕಾರ್ಯದರ್ಶಿಗಳಾದ ಸ್ವಾಮಿ ಹೃದಾನಂದಜಿ, ಮಂಗಳೂರು ರಾಮಕೃಷ್ಣ ಮಠದ ಅಧ್ಯಕ್ಷರಾದ ಸ್ವಾಮಿ ಜಿತಕಾಮಾನಂದಜಿ, ಹಲಸೂರಿನ ರಾಮಕೃಷ್ಣ ಮಠದ ಅಧ್ಯಕ್ಷರಾದ ಸ್ವಾಮಿ ಬೋಧಸ್ವರೂಪಾನಂದಜಿ ಹಾಗೂ ದಾವಣಗೆರೆ ರಾಮಕೃಷ್ಣ ಮಿಷನ್ನಿನ ಕಾರ್ಯದರ್ಶಿಗಳಾದ ಸ್ವಾಮಿ ತ್ಯಾಗೀಶ್ವರಾನಂದಜಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ **'ವಿವೇಕ ದಶಮಿ: ಭಾವಾವಲೋಕನ'** ಹಾಗೂ **'ಔನ್ನತ್ಯದತ್ತ...'** ಎಂಬ ಪುಸ್ತಕಗಳು ಲೋಕಾರ್ಪಣೆಗೊಂಡವು.

**ಯುವ ಸಮ್ಮೇಳನ :** ದಶಮಾನೋತ್ಸವದ ಅಂಗವಾಗಿ ಆಯೋಜಿಸಲಾಗಿದ್ದ **'ಸ್ವಾಮಿ ವಿವೇಕಾನಂದ ಯುವಸಮ್ಮೇಳನ'**ವು ೨೭ರಂದು ಬೆಳಿಗ್ಗೆ ನಡೆಯಿತು. ಬೆಂಗಳೂರಿನ ಇಸ್ರೋ ಸಂಸ್ಥೆಯ ಉಪನಿರ್ದೇಶಕರಾದ ಖ್ಯಾತ ವಿಜ್ಞಾನಿ ಶ್ರೀಮತಿ ಡಾ. ನಂದಿನಿ ಹರಿನಾಥ್‌ರವರು ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದರು. ಸ್ವಾಮಿ ಮುಕ್ತಿದಾನಂದಜಿಯವರು ಅಧ್ಯಕ್ಷತೆ ವಹಿಸಿದ್ದರು. ಪೂಜ್ಯ ಸ್ವಾಮಿ ಹೃದಾನಂದಜಿ, ಸ್ವಾಮಿ ನಿರ್ಭಯಾನಂದ ಸರಸ್ವತೀ ಅವರು ಈ ಸಂದರ್ಭದಲ್ಲಿ ಮಾತನಾಡಿದರು. ವಿಶೇಷ ಆಹ್ವಾನಿತರಾಗಿ ಶಾಸಕ ಶ್ರೀ ಜ್ಯೋತಿಗಣೇಶ್ ಭಾಗವಹಿಸಿದ್ದರು. ವಿಶೇಷ ಉಪನ್ಯಾಸಗಳನ್ನು ಮಾದಿಹಳ್ಳಿ ರಾಮಕೃಷ್ಣ ಮಿಷನ್ನಿನ ಕಾರ್ಯದರ್ಶಿಗಳಾದ ಸ್ವಾಮಿ ಮಂಗಳನಾಥಾನಂದಜಿ, ಭವತಾರಿಣಿ ಆಶ್ರಮದ ಅಧ್ಯಕ್ಷರಾದ ಮಾತಾಜಿ ವಿವೇಕಮಯಿ, ಪ್ರಸಿದ್ಧ ವಾಗ್ಮಿ ಶ್ರೀ ಚಕ್ರವರ್ತಿ ಸೂಲಿಬೆಲೆ ನೆರವೇರಿಸಿದರು. ಅನಂತರ ಉಪನ್ಯಾಸಕಿ ಅಕ್ಷಯಾ ಗೋಖಲೆ, ವೈದ್ಯಕೀಯ ವಿದ್ಯಾರ್ಥಿ ವಿವೇಕ ಜೋಶಿ, ಸಾಫ್ಟ್‌ವೇರ್ ಇಂಜಿನಿಯರ್‌ಗಳಾದ ನಿಖಿಲ್ ಶರ್ಮ ಮತ್ತು ಸುಬ್ರಹ್ಮಣ್ಯ ನಾವಡ ಅವರು ಸಂವಾದ ಕಾರ್ಯಕ್ರಮವನ್ನು ನೆರವೇರಿಸಿಕೊಟ್ಟರು.

**ಶ್ರೀರಾಮಕೃಷ್ಣ ಚಿಂತನಧಾರಾ:** ಡಿ. ೨೭ರಂದು ಸಂಜೆ ನಡೆದ ಈ ಕಾರ್ಯಕ್ರಮದಲ್ಲಿ ದಾವಣಗೆರೆ ರಾಮಕೃಷ್ಣ ಮಿಷನ್ನಿನ ಕಾರ್ಯದರ್ಶಿಗಳಾದ ಸ್ವಾಮಿ ತ್ಯಾಗೀಶ್ವರಾನಂದಜಿ ಮಹಾರಾಜ್ ದಿವ್ಯಸಾನ್ನಿಧ್ಯ ವಹಿಸಿದ್ದರು. ಧಾರವಾಡ ರಾಮಕೃಷ್ಣ-ವಿವೇಕಾನಂದ ಆಶ್ರಮದ ಅಧ್ಯಕ್ಷರಾದ ಸ್ವಾಮಿ ವಿಜಯಾನಂದಜಿ ಮಹಾರಾಜ್ **'ಕಥೆಗಾರ ಶ್ರೀರಾಮಕೃಷ್ಣ'** ಎಂಬ ವಿಷಯವನ್ನು ಕುರಿತು ಉಪನ್ಯಾಸ ನೀಡಿದರು. ಹೊಸಪೇಟೆಯ ಹಂಸಾಂಬ ಶಾರದಾಶ್ರಮದ ಅಧ್ಯಕ್ಷರಾದ ಪೂಜ್ಯ ಮಾತಾಜಿ ಪ್ರಬೋಧಮಯಿ ಅವರು **'ಅವತಾರ-ವರಿಷ್ಠಾಯ ರಾಮಕೃಷ್ಣಾಯ ತೇ ನಮಃ'** ಎಂಬ ವಿಷಯದ ಬಗ್ಗೆ ಉಪನ್ಯಾಸ ನೀಡಿದರು. ಅನಂತರ ಗದಗ-ವಿಜಯಪುರ ರಾಮಕೃಷ್ಣ-ವಿವೇಕಾನಂದ ಆಶ್ರಮದ ಅಧ್ಯಕ್ಷರಾದ ಸ್ವಾಮಿ ನಿರ್ಭಯಾನಂದ ಸರಸ್ವತೀ ಅವರು ಈ ಗೋಷ್ಠಿಯಲ್ಲಿ ಮಾತನಾಡಿದರು. ಸಮಾಜಸೇವಕರಾದ ಶ್ರೀ ಬಿ.ಆರ್. ನಟರಾಜ ಶ್ರೇಷ್ಠಿಯವರು ವಿಶೇಷ ಆಹ್ವಾನಿತರಾಗಿದ್ದರು.

**ಧ್ಯಾನಸುಖಸಾಗರ:** ಡಿ.೨೮ರಂದು ಬೆಳಿಗ್ಗೆ ಬೆಂಗಳೂರಿನ ಶ್ರೀರಾಮಕೃಷ್ಣ ವಿದ್ಯಾರ್ಥಿ ಮಂದಿರಂನ ಮುಖ್ಯಸ್ಥರಾದ ಸ್ವಾಮಿ ತದ್ಯುಕ್ತಾನಂದಜಿ ಮತ್ತು ಕೋಲ್ಕತ್ತಾ ವಿವೇಕಾನಂದ ವಿಶ್ವವಿದ್ಯಾಲಯದ ಸ್ವಾಮಿ ಶಿವಪೂರ್ಣಾನಂದಜಿಯವರು **ಭಗವನ್ನಾಮ ಸಂಕೀರ್ತನೆ**ಯನ್ನು ನೆರವೇರಿಸಿ











ಕೊಟ್ಟರು. ಬೆಂಗಳೂರು ಬಸವನಗುಡಿ ರಾಮಕೃಷ್ಣ ಮಠದ ಸ್ವಾಮಿ ವೀರೇಶಾನಂದಜಿಯವರು **'ಆಧ್ಯಾತ್ಮಿಕ ಜೀವನದ ಮೂರು ಸ್ತಂಭಗಳು: ಪ್ರಾರ್ಥನೆ, ಜಪ ಮತ್ತು ಧ್ಯಾನ'** ಎಂಬ ವಿಚಾರವಾಗಿ ಉಪನ್ಯಾಸ ನೀಡಿದರು.

**ಶ್ರೀರಾಮಕೃಷ್ಣ ಶಿಕ್ಷಕರ ಸಮ್ಮೇಳನ :** ಡಿ. ೨೮ರಂದು ಬೆಳಿಗ್ಗೆ ನಡೆದ ಈ ಸಮ್ಮೇಳನದ ಅಧ್ಯಕ್ಷತೆಯನ್ನು ಸ್ವಾಮಿ ನಿರ್ಭಯಾನಂದ ಸರಸ್ವತೀ ಮಹಾರಾಜ್ ವಹಿಸಿದ್ದರು. ವಿಶೇಷ ಪ್ರವಚನಗಳ ಗೋಷ್ಠಿಯಲ್ಲಿ ಮೈಸೂರು ರಿಂಸೆ ಮುಖ್ಯಸ್ಥರಾದ ಸ್ವಾಮಿ ಮಹಾಮೇಧಾನಂದಜಿಯವರು **'ಶಿಕ್ಷಣ ವೃತ್ತಿಯ ಪಾವಿತ್ರ್ಯತೆ : ಸವಾಲುಗಳು, ಸರಿಯುತ್ತರ'** ಎಂಬ ವಿಷಯದ ಬಗ್ಗೆ ಮಾತನಾಡಿದರು. ಕಡಪ ರಾಮಕೃಷ್ಣ ಮಿಷನ್ನಿನ ಕಾರ್ಯದರ್ಶಿಗಳಾದ ಸ್ವಾಮಿ ಅನುಪಮಾನಂದಜಿಯವರು **'ಆದರ್ಶಗುರು ಶ್ರೀರಾಮಕೃಷ್ಣ'** ಎಂಬ ವಿಷಯವನ್ನು ಕುರಿತು ಭಾಷಣ ಮಾಡಿದರು. ರಾಣೆಬೆನ್ನೂರಿನ ರಾಮಕೃಷ್ಣ-ವಿವೇಕಾನಂದ ಆಶ್ರಮದ ಅಧ್ಯಕ್ಷರಾದ ಸ್ವಾಮಿ ಪ್ರಕಾಶಾನಂದಜಿಯವರು **'ಕಲಿಯಲು ಆಸಕ್ತಿ ಉಳ್ಳವರೇ ಕಲಿಸಲು ಯೋಗ್ಯರು'** ಎಂಬ ವಿಷಯದ ಬಗ್ಗೆ ಮಾತನಾಡಿದರು. ತುಮಕೂರು ಡಯಟ್‌ನ ಉಪನಿರ್ದೇಶಕರಾದ ಶ್ರೀ ಕೆ. ಮಂಜುನಾಥ್, ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಹನುಮಂತಪ್ಪನವರು ವಿಶೇಷ ಆಹ್ವಾನಿತರಾಗಿ ಭಾಗವಹಿಸಿದ್ದರು. ಅನಂತರ ನಡೆದ ಸಂವಾದ ಕಾರ್ಯಕ್ರಮವನ್ನು ಮೈಸೂರು ಶ್ರೀರಾಮಕೃಷ್ಣ ವಿದ್ಯಾಶಾಲೆಯ ಮುಖ್ಯಸ್ಥರಾದ ಪೂಜ್ಯ ಸ್ವಾಮಿ ಯುಕ್ತೇಶಾನಂದಜಿ ಹಾಗೂ ತುಮಕೂರಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹಪ್ರಾಧ್ಯಾಪಕರಾದ ಶ್ರೀಮತಿ ಡಾ. ಕೆ.ವಿ.ಅನಸೂಯ ಅವರು ನೆರವೇರಿಸಿಕೊಟ್ಟರು.

**ಶ್ರೀಮಾತೆ ಶ್ರೀಶಾರದಾದೇವಿ ಚಿಂತನಧಾರಾ:** ಡಿ. ೨೮ರಂದು ಸಂಜೆ ನಡೆದ ಈ ಗೋಷ್ಠಿಯಲ್ಲಿ ಯಲಹಂಕ ಶ್ರೀರಾಮಕೃಷ್ಣ ವೇದಾಂತಾಶ್ರಮದ ಅಧ್ಯಕ್ಷರಾದ ಸ್ವಾಮಿ ಅಭಯಾನಂದಜಿಯವರು **'ಆಶ್ರಮ ಧರ್ಮಗಳ ಆದರ್ಶ ಪಥದರ್ಶಿ – ಶ್ರೀರಾಮಕೃಷ್ಣ ಸತಿ'** ಎಂಬ ವಿಷಯದ ಬಗ್ಗೆ ಉಪನ್ಯಾಸ ನೀಡಿದರು. ತುಮಕೂರಿನ ದಂತವೈದ್ಯರಾದ ಡಾ. ಕೆ.ಎಸ್.ಸ್ಮಿತಾ ಅವರು **'ಬ್ರಹ್ಮಶಕ್ತಿಸುಖದಾಯಿನಿ ಮಾ'** ಎಂಬ ವಿಷಯದ ಬಗ್ಗೆ, ಚಳ್ಳಕೆರೆ ಶ್ರೀಶಾರದಾಶ್ರಮದ ಮುಖ್ಯಸ್ಥರಾದ ಮಾತಾ ತ್ಯಾಗಮಯಿ ಅವರು **'ಭಗವತ್ ತತ್ತ್ವದ ಮಾತೃಸ್ವರೂಪ ಶ್ರೀಶಾರದಾದೇವಿ'** ಎಂಬ ವಿಷಯದ ಬಗ್ಗೆ ಉಪನ್ಯಾಸ ನೀಡಿದರು.

**'ಸ್ವರ-ರಾಗಸುಧಾ' ಭಕ್ತಿ ಸಂಗೀತ:** ಸಂಜೆ ೬.೩೦ರಿಂದ ಖ್ಯಾತ ಸಂಗೀತಗಾರ ವಿದ್ವಾನ್ ಡಾ. ಕೈಲಾಶ್ ಹೇಮಚಂದ್ರ ಅವರು ಭಕ್ತಿ ಸಂಗೀತ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಶ್ರೀ ವಿಶ್ವಜಿತ್ ಅವರು ವಯೋಲಿನ್, ಶ್ರೀ ಚೆಲುವರಾಜು ಮೃದಂಗ, ಹಾಗೂ ಶ್ರೀ ಎನ್. ಗುರುಮೂರ್ತಿಯವರು ಘಟಂನಲ್ಲಿ ಸಹಕರಿಸಿದರು.

**ವಿಶೇಷ ಪ್ರವಚನಗಳು:** ಡಿ. ೨೯ರಂದು ಬೆಳಿಗ್ಗೆ ೧೦ರಿಂದ ನಡೆದ ವಿಶೇಷ ಪ್ರವಚನಗಳಲ್ಲಿ ಸ್ವಾಮಿ ವೀರೇಶಾನಂದ ಸರಸ್ವತಿಯವರು **'ರಾಮಕೃಷ್ಣ ಆಂದೋಲನ: ಭಕ್ತರ ಕರ್ತವ್ಯಗಳು'** ಎಂಬ ವಿಷಯದ ಬಗ್ಗೆ, ಸ್ವಾಮಿ ನಿರ್ಭಯಾನಂದ ಸರಸ್ವತಿಯವರು **' ಮಾನವ ಅಭ್ಯುದಯ ಮತ್ತು ಸನಾತನ ಧರ್ಮ'** ಎಂಬ ವಿಷಯದ ಬಗ್ಗೆ, ಸ್ವಾಮಿ ಮುಕ್ತಿದಾನಂದಜಿಯವರು **'ಮಾನವೋದ್ಧಾರ ಮತ್ತು ದೇವಾಲಯ ಸಂಸ್ಕೃತಿ'** ಎಂಬ ವಿಷಯದ ಬಗ್ಗೆ , ಮಾತಾಜಿ ವಿವೇಕಮಯಿ ಅವರು **'ಶ್ರೀಮಾತೆ : ಪ್ರೇಮ-ತಾಳ್ಮೆಯ ಸಂಪದೆ'** ಎಂಬ ವಿಷಯದ ಬಗ್ಗೆ ಮಾತನಾಡಿದರು.

**ಸಮಾರೋಪ ಸಮಾರಂಭ:** ಮಧ್ಯಾಹ್ನ **'ಯತಿಪೂಜಾ ಕಾರ್ಯಕ್ರಮ'** ನಡೆಯಿತು. ಬಳಿಕ ಈ ಕಾರ್ಯಕ್ರಮಗಳ **ಸಮಾರೋಪ ಸಮಾರಂಭ** ನಡೆಯಿತು. ಸ್ವಾಮಿ ನಿತ್ಯಸ್ಥಾನಂದಜಿ, ಸ್ವಾಮಿ ಜಿತಕಾಮಾನಂದಜಿ, ಸ್ವಾಮಿ ಮುಕ್ತಿದಾನಂದಜಿ, ಸ್ವಾಮಿ ಹೃದಾನಂದಜಿ, ಸ್ವಾಮಿ ಬೋಧಸ್ವರೂಪಾನಂದಜಿ, ಸ್ವಾಮಿ ತ್ಯಾಗೀಶ್ವರಾನಂದಜಿ, ಸ್ವಾಮಿ ನಿರ್ಭಯಾನಂದ ಸರಸ್ವತೀ, ಸ್ವಾಮಿ ವೀರೇಶಾನಂದ ಸರಸ್ವತೀ ಇವರುಗಳ ದಿವ್ಯ ಸಾನ್ನಿಧ್ಯದೊಂದಿಗೆ ಸಮಾರೋಪ ಸಮಾರಂಭ ನೆರವೇರಿತು. ಇದರಲ್ಲಿ ವಿಶೇಷ ಆಹ್ವಾನಿತರಾಗಿ ಡಾ. ವೂಡೇ ಪಿ. ಕೃಷ್ಣ, ಡಾ. ರಮೇಶ್ ಬಾಬು , ಎ.ವಿ.ರಂಗನಾಥ್ ಅವರು ಭಾಗವಹಿಸಿದ್ದರು. ಸಂಜೆ ೬.೨೫ ರಿಂದ **'ವಾದ್ಯ ವೈವಿಧ್ಯ'** ಸುಮುಖ ವೀಣಾ ಮತ್ತು ಕೊಳಲು ವಾದನ ನಡೆಯಿತು. ವಿದ್ವಾನ್ ಸಂಪಗೋಡು ಎಸ್. ವಿಘ್ನರಾಜ, ಶ್ರೀ ವಿಶ್ವಜಿತ್ ಮತ್ತೂರು, ಅನಿರುದ್ಧ ಎಸ್.ಭಟ್, ಬಿ. ರಾಜಶೇಖರ್ ಇದನ್ನು ನಡೆಸಿಕೊಟ್ಟರು.





ಸುದ್ದಿ ಸಂಚಯ

# ರಾಮಕೃಷ್ಣ ಮಿಷನ್‌ನ 115ನೇ ವಾರ್ಷಿಕ ಸಭೆಯ ಸಂಕ್ಷಿಪ್ತ ವರದಿ

**ರಾ**ಮಕೃಷ್ಣ ಮಿಷನ್ನಿನ **115ನೇ ವಾರ್ಷಿಕ ಸಭೆ**ಯು 2024 ಡಿಸೆಂಬರ್ 15ರ ಭಾನುವಾರ ಮಧ್ಯಾಹ್ನ 3.30ಕ್ಕೆ ಬೇಲೂರು ಮಠದಲ್ಲಿ ನಡೆಯಿತು. ಈ ಸಭೆಯಲ್ಲಿ ರಾಮಕೃಷ್ಣ ಮಠ ಮತ್ತು ರಾಮಕೃಷ್ಣ ಮಿಷನ್ನಿನ ಪ್ರಧಾನ ಕಾರ್ಯದರ್ಶಿಗಳು, '2023-24ನೇ ವಿತ್ತೀಯ ವರ್ಷದ ಅವಧಿಯಲ್ಲಿ ನಡೆದ ರಾಮಕೃಷ್ಣ ಮಿಷನ್ನಿನ ಕಾರ್ಯಗಳ ಬಗೆಗಿನ ಆಡಳಿತ ಮಂಡಳಿಯ ವರದಿ' ಯನ್ನು ಮಂಡಿಸಿದರು. ಅದರ ಸಾರಾಂಶವನ್ನು ಈ ಕೆಳಗೆ ನೀಡಲಾಗಿದೆ:

**೧) ರಾಮಕೃಷ್ಣ ಮಿಷನ್ನಿಗೆ ಸಂದ ಪ್ರಶಸ್ತಿ ಮತ್ತು ಮನ್ನಣೆಗಳು :**

1) **ರಾಮಕೃಷ್ಣ ಮಿಷನ್**‌ಗೆ – i) ಪಶ್ಚಿಮ ಬಂಗಾಳದ ರಾಜ್ಯಪಾಲರಿಂದ 'ರಾಜ್ಯಪಾಲರ ಉತ್ಕೃಷ್ಟತಾ ಪ್ರಶಸ್ತಿ' (*Governer's Award for Excellence*) ಲಭಿಸಿದೆ. ಸಾಮಾಜಿಕ ಸೇವೆಯ ಕ್ಷೇತ್ರದಲ್ಲಿ ಮಿಷನ್ ವಹಿಸಿದ ಪಾತ್ರವನ್ನು ಪರಿಗಣಿಸಿ ಈ ಪ್ರಶಸ್ತಿಯನ್ನು ನೀಡಲಾಗಿದೆ. ii) ಅರುಣಾಚಲ ಪ್ರದೇಶದಲ್ಲಿ ಸಲ್ಲಿಸಿದ ಗಮನಾರ್ಹ ಸೇವೆಗಾಗಿ ಮಿಷನ್‌ಗೆ 'ಅರುಣಾಚಲ ಪ್ರದೇಶ ರಾಜ್ಯಪ್ರಶಸ್ತಿ' ಲಭಿಸಿದೆ.

2) ತಿರುಪತಿಯಲ್ಲಿರುವ ರಾಷ್ಟ್ರೀಯ ಸಂಸ್ಕೃತ ವಿಶ್ವವಿದ್ಯಾನಿಲಯದಲ್ಲಿ ನಡೆದ, 'ಅಖಿಲ ಭಾರತ ಸಂಸ್ಕೃತ ವಿದ್ಯಾರ್ಥಿಗಳ ಕೌಶಲ್ಯ ಉತ್ಸವ' ದಲ್ಲಿ **ವಿವೇಕಾನಂದ ವಿಶ್ವವಿದ್ಯಾನಿಲಯ**ದ ವಿದ್ಯಾರ್ಥಿಗಳು 1 ಚಿನ್ನ, 1 ಬೆಳ್ಳಿ ಹಾಗೂ 1 ಕಂಚಿನ ಪದಕಗಳನ್ನು ಗಳಿಸಿದ್ದಾರೆ.

3) ತ್ರಿಪುರಾ ರಾಜ್ಯದ ಅಗರ್ತಲಾದ **ವಿವೇಕನಗರ**ದಲ್ಲಿರುವ ಶಾಲೆಯು ಮಾದರಿ ಸಿ.ಬಿ.ಎಸ್.ಸಿ. ಶಾಲೆಯೆಂದು ಕೇಂದ್ರೀಯ ಮಾಧ್ಯಮಿಕ ಶಾಲಾ ಮಂಡಲಿಯ (CBSE) ಮುಖ್ಯಸ್ಥರು ಪ್ರಶಂಸಿಸಿದ್ದಾರೆ. ಈ ಶಾಲೆಯ ವಿದ್ಯಾರ್ಥಿಗಳು ಭಾರತ ಸರ್ಕಾರದ ನೀತಿ ಆಯೋಗವು ಏರ್ಪಡಿಸಿದ ರಾಷ್ಟ್ರೀಯ ಮಟ್ಟದ ಬೂಟ್ ಕ್ಯಾಂಪ್‌ನಲ್ಲಿ 6ನೇ ಸ್ಥಾನವನ್ನು ಪಡೆದಿದೆ.

**೨) ಹೊಸ ಶಾಖಾಕೇಂದ್ರಗಳು:**

1) ರಾಮಕೃಷ್ಣ ಮಿಷನ್ನಿನ ೬ ಹೊಸ ಶಾಖಾಕೇಂದ್ರಗಳು ಆರಂಭವಾಗಿವೆ. ಅವುಗಳು – ಹರಿಯಾಣದ **ಗುರುಗ್ರಾಮ**, ಪಶ್ಚಿಮ ಬಂಗಾಳದ **ಕಲ್ಯಾಣಿ**, ಅಸ್ಸಾಂನ **ಖರುಪೇಟಿಯಾ**, ಮಹಾರಾಷ್ಟ್ರದ **ಸಕ್ವಾರ್**, ತಮಿಳುನಾಡಿನ **ತಿರುಮುಕ್ಕೂಡಲ್** ಹಾಗೂ ಮಧ್ಯಪ್ರದೇಶದ **ಉಜ್ಜಯಿನಿ**.

2) ರಾಮಕೃಷ್ಣ ಮಠದ ಹೊಸ ಶಾಖಾಕೇಂದ್ರಗಳು ಮಧ್ಯಪ್ರದೇಶದ **ಅಮರಕಂಟಕ್**, ಪಶ್ಚಿಮ ಬಂಗಾಳದ **ದಕ್ಷಿಣೇಶ್ವರ** ಹಾಗೂ ಕರ್ನಾಟಕದ **ವೆಂಕಟಾಪುರ** – ಈ ಪ್ರದೇಶಗಳಲ್ಲಿ ಆರಂಭವಾಗಿವೆ.

**೩) ಚಟುವಟಿಕೆಗಳು: ಭಾರತದಲ್ಲಿ :**

ಭಾರತದಲ್ಲಿರುವ ರಾಮಕೃಷ್ಣ ಮಠ ಮತ್ತು ರಾಮಕೃಷ್ಣ ಮಿಷನ್ ಒಟ್ಟು **235** ಶಾಖಾಕೇಂದ್ರ ಹಾಗೂ ಉಪ-ಕೇಂದ್ರಗಳ ಮೂಲಕ ವಿವಿಧ ಸೇವಾ ಕಾರ್ಯಗಳಿಗಾಗಿ 1292.03 ಕೋಟಿ ರೂಪಾಯಿಗಳನ್ನು ಖರ್ಚುಮಾಡಿವೆ. ವಿವರಗಳು ಈ ಕೆಳಗಿನಂತಿವೆ:

| ಸೇವಾಕ್ಷೇತ್ರದ ಹೆಸರು | ಫಲಾನುಭವಿಗಳ ಸಂಖ್ಯೆ (ಲಕ್ಷಗಳಲ್ಲಿ) | ಖರ್ಚು ಮಾಡಿದ ಮೊತ್ತ (ಕೋಟಿಗಳಲ್ಲಿ) |
|---|---|---|
| ಪರಿಹಾರ ಮತ್ತು ಪುನರ್ವಸತಿ | 5.23 | 8.56 |
| ಸಾಧಾರಣ ಜನಕಲ್ಯಾಣ | 56.34 | 29.07 |
| ವೈದ್ಯಕೀಯ | 79.28 | 496.70 |
| ಶೈಕ್ಷಣಿಕ | 2.87 | 712.89 |
| ಗ್ರಾಮೀಣಾಭಿವೃದ್ಧಿ | 2.40 | 18.31 |
| ಸಾಹಿತ್ಯ ಪ್ರಕಟಣೆ | | 26.50 |
| | **ಒಟ್ಟು** | **1,292.03** |

**೩) ಚಟುವಟಿಕೆಗಳು: ವಿದೇಶಗಳಲ್ಲಿ :** ಭಾರತದ ಹೊರಗಡೆ 24 ದೇಶಗಳಲ್ಲಿರುವ ರಾಮಕೃಷ್ಣ ಮಿಷನ್ ಹಾಗೂ ರಾಮಕೃಷ್ಣ ಮಠದ 100 ಶಾಖಾಕೇಂದ್ರಗಳು ಹಾಗೂ ಉಪ-ಕೇಂದ್ರಗಳು ವಿವಿಧ ಸೇವಾಕಾರ್ಯಗಳನ್ನು ನಡೆಸಿವೆ.

ರಾಮಕೃಷ್ಣ ಮಿಷನ್ ಮತ್ತು ರಾಮಕೃಷ್ಣ ಮಿಷನ್ನಿನ ಸೇವಾಕಾರ್ಯಗಳನ್ನು ಮುಂದುವರೆಸಿಕೊಂಡು ಹೋಗುವಲ್ಲಿ ಅತ್ಯಂತ ಕಾಳಜಿಯಿಂದ ಅಮೂಲ್ಯವಾದ ಬೆಂಬಲ ಹಾಗೂ ಸಹಕಾರ ನೀಡಿರುವ ನಮ್ಮ ಸದಸ್ಯರಿಗೂ, ಹಿತೈಷಿಗಳಿಗೂ, ಭಕ್ತರಿಗೂ ಈ ಸಂದರ್ಭದಲ್ಲಿ ನಮ್ಮ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಮರ್ಪಿಸುತ್ತೇವೆ.

(ಸ್ವಾಮಿ ಸುವೀರಾನಂದ)
ಪ್ರಧಾನ ಕಾರ್ಯದರ್ಶಿಗಳು

15 ಡಿಸೆಂಬರ್, 2024
ರಾಮಕೃಷ್ಣ ಮಠ ಮತ್ತು ರಾಮಕೃಷ್ಣ ಮಿಷನ್

Managing Editor : Swami Muktidananda    Editor : Swami Jnanayogananda
Printed and Published by Swami Muktidananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020